ಹೊಸಕೋಟೆ ಯೋಜನಾ ಪ್ರಾಧಿಕಾರ

ಹೊಸಕೋಟೆ.

2019-20 ನೇ ಸಾಲಿನ ವಾರ್ಷಿಕ ವರದಿ

(01.04.2019 ರಿಂದ 31.03.2020 ರ ವರೆಗೆ)

ಪರಿವಿಡಿ

ಕ್ರ.ಸಂ.	ವಿವರಗಳು	ಪುಟ ಸಂಖ್ಯೆ
1.	ಪ್ರಸ್ತಾವನೆ (Introdution)	1
2.	ಹೊಸಕೋಟೆ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ	1
3.	ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿ	2
4.	ಪ್ರಾದೇಶಿಕ ನಕ್ಷೆ	4
5.	ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ	5
6.	ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು	6
7.	ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು	6
8.	ಕರ್ತವ್ಯ ನಿರ್ವಹಣೆಗಾಗಿ ನಿಗಧಿ ಪಡಿಸಲಾದ ಸೂತ್ರಗಳು	7
9.	ಪ್ರಾಧಿಕಾರದಲ್ಲಿ ಪರಿಗಣಿಸಲಾಗುವ ಕಾಯ್ದೆ / ನಿಯಮಗಳು	7
10.	ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು	7
11.	ಮಾಹಿತಿ ಹಕ್ಕು ಅಧಿನಿಯಮ-2005 ರಡಿಯಲ್ಲಿ ಮಾಹಿತಿ ನೀಡುವ ಬಗ್ಗೆ	7
12.	ಅಂತರ್‌ಜಾಲ (Website)	8
13.	ಮಹಾಯೋಜನೆ-2031	8
14.	ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು	9
15.	ಪ್ರಾಧಿಕಾರದ ಸಭೆಗಳು	12
16.	ಹೊಸಕೋಟೆ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ	13
17.	ಪ್ರಾಧಿಕಾರದ ವಾಹನಗಳ ವಿವರ	14
18.	ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಿರುವ ಬಗ್ಗೆ	14
19.	ಪ್ರಾಧಿಕಾರದ ಆಯವ್ಯಯ (Budget)	15
20.	ಪ್ರಾಧಿಕಾರದ ಹಣಕಾಸಿನಲ್ಲಿ ವಿವಿಧ ಇಲಾಖೆಗಳಿಂದ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳು	15
21.	ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು	17
	ನಮೂನೆ -5	18
	ಅನುಬಂಧ-1	19
	ಅನುಬಂಧ-2	21

ಪ್ರಸ್ತಾವನೆ (Introdution):

ಹೊಸಕೋಟೆ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ಸ್ವಂತ ಕಛೇರಿಯು ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ -562114 ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸರ್ಕಾರದಿಂದ ನೇಮಕಗೊಂಡ ಸ್ಥಳೀಯ ಪ್ರತಿನಿಧಿಗಳೊಬ್ಬರು ಪ್ರಾಧಿಕಾರದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ನಿಯೋಜನೆಯ ಮೇಲೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿ ಪ್ರಾಧಿಕಾರದ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:

ಹೊಸಕೋಟೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವು ಈ ಮೊದಲು ಸರ್ಕಾರವು ಅನುಮೋದಿಸಿದ ರಚನಾ ನಕ್ಷೆ-2021 ರಂತೆ APZ 4 ಮತ್ತು IZ 5, 6 ರಲ್ಲಿ ಬರುತ್ತಿದ್ದು, ಸದರಿ ಪ್ರದೇಶದಲ್ಲಿನ ಬೆಳವಣಿಗೆಗಳನ್ನು ನೇರವಾಗಿ ಬಿ.ಎಂ.ಆರ್.ಡಿ.ಎ. ಕಾಯ್ದೆಯಡಿಯಲ್ಲಿ ನಿಯಂತ್ರಿಸಲಾಗುತ್ತಿತ್ತು.

ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ ಸದರಿ ಪ್ರದೇಶವನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರನ್ವಯ ಸರ್ಕಾರದ ಆದೇಶ ಸಂ. ನಅಇ 118 ಬೆಂರೂಪ್ರಾ 2003, ದಿನಾಂಕ: 03.03.2006 ರಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 31 ಬೆಂರೂಪ್ರಾ 2006 ದಿನಾಂಕ: 19.07.2006 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರನ್ವಯ ಹೊಸಕೋಟೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಅದರಂತೆ, ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ, ಸರ್ಕಾರದ ಆದೇಶ ಸಂ: ನಅಇ 83 ನಯೋಸೇ 2009, ಬೆಂಗಳೂರು, ದಿನಾಂಕ: 25.06.2009 ರಲ್ಲಿ ಪ್ರಾಧಿಕಾರದ ಸದಸ್ಯ-ಕಾರ್ಯದರ್ಶಿ ಹುದ್ದೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸಿ ಆದೇಶಿಸಿ ನೇಮಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 125 ಬಿಎಂಆರ್ 2018 ದಿನಾಂಕ: 06.08.2018 ರ ಅಧಿಸೂಚನೆಯಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4-ಸಿ(3) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರನ್ನು ಅಧ್ಯಕ್ಷರನ್ನಾಗಿ, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯಾಗಿ, ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ ಮತ್ತು ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ಹಾಗೂ ಪೌರಾಯುಕ್ತರು, ಹೊಸಕೋಟೆ ನಗರಸಭೆ, ಹೊಸಕೋಟೆ ರವರುಗಳನ್ನು ಸದಸ್ಯರನ್ನಾಗಿ ಮನರ್ ರಚಿಸಿ ಆದೇಶಿಸಿದೆ. ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 05 ಬಿಎಂಆರ್ 2020, ದಿನಾಂಕ: 14.02.2020 ರಲ್ಲಿ ಅಧಿಕಾರೇತರ ಅಧ್ಯಕ್ಷರನ್ನು ಹಾಗೂ ಸದಸ್ಯರುಗಳನ್ನು ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿರುತ್ತದೆ.

ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರು ಅಧ್ಯಕ್ಷರಾಗಿ ದಿನಾಂಕ: 01.04.2019 ರಿಂದ ದಿನಾಂಕ: 14.02.2020 ರವರೆಗೆ ಕಾರ್ಯ ನಿರ್ವಹಿಸಿರುತ್ತಾರೆ.	ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ.
ಶ್ರೀ ಸಿ. ನಾಗರಾಜು ರವರು ಅಧ್ಯಕ್ಷರಾಗಿ ದಿನಾಂಕ: 15.02.2020 ರಿಂದ 31.03.2020 ರವರೆಗೆ.	ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	ಸದಸ್ಯ ಕಾರ್ಯದರ್ಶಿಗಳು
ಪೌರಾಯುಕ್ತರು, ನಗರಸಭೆ, ಹೊಸಕೋಟೆ.	ಸದಸ್ಯರು
ಶ್ರೀ ಎಸ್. ಅರುಣ್ ಕುಮಾರ್ (ಹರಿ) ರವರು ಸದಸ್ಯರಾಗಿ ದಿನಾಂಕ: 15.02.2020 ರಿಂದ 31.03.2020 ರವರೆಗೆ.	ಸದಸ್ಯರು
ಶ್ರೀ ಎಸ್. ಕೆ. ಸಂತೋಷ್ ಕುಮಾರ್ ರವರು ಸದಸ್ಯರಾಗಿ ದಿನಾಂಕ: 15.02.2020 ರಿಂದ 31.03.2020 ರವರೆಗೆ.	ಸದಸ್ಯರು
ಶ್ರೀ ಎನ್. ವಿಶ್ವನಾಥ ರವರು ಸದಸ್ಯರಾಗಿ ದಿನಾಂಕ: 15.02.2020 ರಿಂದ 31.03.2020 ರವರೆಗೆ.	ಸದಸ್ಯರು

ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿ:

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ನಗರಸಭೆ ಒಳಗೊಂಡಂತೆ ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿ, ಸೂಲಿಬೆಲೆ ಹೋಬಳಿ, ಅನುಗೊಂಡನಹಳ್ಳಿ ಹೋಬಳಿ, ನಂದಗುಡಿ ಹೋಬಳಿ ಮತ್ತು ಜಡಿಗೇನಹಳ್ಳಿ ಹೋಬಳಿಗಳಲ್ಲಿ (05 ಹೋಬಳಿಗಳ) ಬರುವಂತಹ ಸಂಪೂರ್ಣ ಗ್ರಾಮಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳನ್ನು ಒಳಗೊಂಡಂತಹ (ಒಟ್ಟು 316 ಗ್ರಾಮಗಳು) ಪ್ರದೇಶದ ವ್ಯಾಪ್ತಿಗೆ ಕರ್ನಾಟಕ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರನ್ವಯ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿದ್ದು, ಸದರಿ **ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 591.72 ಚ.ಕಿ.ಮೀ. ಇರುತ್ತದೆ.** ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ 11 ಯೋಜನಾ ಪ್ರಾಧಿಕಾರಗಳಲ್ಲಿ

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಪೂರ್ವ ಭಾಗದಲ್ಲಿರುತ್ತದೆ ಹಾಗೂ ಕರ್ನಾಟಕ ರಾಜ್ಯದ ಆಗ್ನೇಯ ಭಾಗದಲ್ಲಿರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಶಿಡ್ಲಘಟ್ಟ ತಾಲ್ಲೂಕು ಮತ್ತು ದೇವನಹಳ್ಳಿ ತಾಲ್ಲೂಕು, ಪೂರ್ವಕ್ಕೆ ಕೋಲಾರ ಮತ್ತು ಮಾಲೂರು ತಾಲ್ಲೂಕು, ದಕ್ಷಿಣಕ್ಕೆ ತಮಿಳುನಾಡು ರಾಜ್ಯದ ಎಲ್ಲೆಯವರೆಗೆ ವಿಸ್ತರಿಸಿರುತ್ತದೆ. ಹಾಗೂ ಪಶ್ಚಿಮಕ್ಕೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ ಇರುತ್ತದೆ. ಹೊಸಕೋಟೆ ಪಟ್ಟಣವು ಬೆಂಗಳೂರಿನಿಂದ 27 ಕಿ.ಮೀ. ದೂರದಲ್ಲಿದ್ದು, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ NH-4 ಮತ್ತು NH-207 ಹಾಗೂ ರಾಜ್ಯ ಹೆದ್ದಾರಿಗಳಾದ SH-35, SH-82, SH-95 ಮತ್ತು SH-96 ರಸ್ತೆಗಳು ಹಾದು ಹೋಗುತ್ತವೆ. ಸದರಿ ಸ್ಥಳೀಯ ಯೋಜನಾ ಪ್ರದೇಶವು ಉತ್ತಮ ಪ್ರಾದೇಶಿಕ ರಸ್ತೆ ಸಂಪರ್ಕಜಾಲವನ್ನು ಹಾಗೂ ರೈಲು ಮಾರ್ಗಗಳನ್ನು ಹೊಂದಿರುತ್ತದೆ.


ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿ.ಎಂ.ಆರ್ 2016, ಬೆಂಗಳೂರು, ದಿನಾಂಕ: 24.06.2016 ರಲ್ಲಿ **"ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ"** ವನ್ನು ಘೋಷಿಸಲಾಗಿರುತ್ತದೆ. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಹಾಲಿ 316 ಗ್ರಾಮ ಮತ್ತು ಹೊಸಕೋಟೆ ನಗರಸಭೆ ಪ್ರದೇಶವನ್ನೂ ಒಳಗೊಂಡಂತೆ ಒಟ್ಟು 59172 ಹೆಕ್ಟೇರ್ ಅಥವಾ 591.72 ಚ.ಕಿ.ಮೀ. ಪ್ರದೇಶವಿದ್ದು, ಅದರಲ್ಲಿ **STRR** ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ 51 ಗ್ರಾಮಗಳ ಒಟ್ಟು 11624 ಹೆಕ್ಟೇರ್ ಅಥವಾ 116.24 ಚ.ಕಿ.ಮೀ. ವಿಸ್ತೀರ್ಣವನ್ನು ಹಿಂತೆಗೆದುಕೊಳ್ಳಲಾಗಿರುತ್ತದೆ.

ಈ ಮೊದಲಿದ್ದ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 591.72 ಚ.ಕಿ.ಮೀ. ನಲ್ಲಿ ಉಪನಗರ ವರ್ತುಲ ರಸ್ತೆ **(STRR)** ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಹಿಂತೆಗೆದುಕೊಳ್ಳಲಾದ 51 ಗ್ರಾಮಗಳ 116.24 ಚ.ಕಿ.ಮೀ. ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ 475.48 ಚ.ಕಿ.ಮೀ. ವಿಸ್ತೀರ್ಣವು (ಹೊಸಕೋಟೆ ನಗರಸಭೆ ಹಾಗೂ ತಾಲ್ಲೂಕಿನ 249 ಗ್ರಾಮಗಳು ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳು ಸೇರಿದಂತೆ ಒಟ್ಟಾರೆ 265 ಗ್ರಾಮಗಳು) ಹಾಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವಾಗಿರುತ್ತದೆ.

ಪ್ರಾದೇಶಿಕ ನಕ್ಷೆ



ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ



ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು:

1. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆ ತಯಾರಿಕೆ: ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಂತೆ ಈ ಮಹಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಠಾನಗೊಳಿಸುವುದು. ಅಲ್ಲದೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಹಳ್ಳಿಗಳಿಗೆ ಅಭಿವೃದ್ಧಿ ನಕ್ಷೆ ತಯಾರಿಸುವುದು.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
3. ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
4. ಭೂ ಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕಾ ಮತ್ತು ಇತರೆ ಉದ್ದೇಶದ ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
5. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಉಪಯೋಗಗಳನ್ನು ಹಾಗೂ ಬೆಳವಣಿಗೆಗಳನ್ನು ನಿಯಂತ್ರಿಸುವ ಸಂಬಂಧ ಸದರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಧ್ಯಂತರ ಮಹಾ ಯೋಜನೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು, ಸದರಿ ಮಧ್ಯಂತರ ಮಹಾಯೋಜನೆಗೆ ದಿನಾಂಕ: 28.05.2009 ರಂದು ಸರ್ಕಾರದ ಅನುಮೋದನೆಯಾಗಿರುತ್ತದೆ. ಸದರಿ ಅನುಮೋದಿತ ಮಧ್ಯಂತರ ಮಹಾ ಯೋಜನೆಯ ವಲಯ ನಿಯಮಾವಳಿಗಳಿಗನುಗುಣವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸಲಾಗುತ್ತಿತ್ತು.

   ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸಲಾಗಿದ್ದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 16.09.2013 ರಲ್ಲಿ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ. ನಂತರ ಸದರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸಲಾಗಿದ್ದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 30.01.2018 ರಲ್ಲಿ ಅಂತಿಮ ಅನುಮೋದನೆ ದೊರೆತಿದ್ದು, ಅಂದಿನಿಂದ ಸದರಿ ಮಹಾಯೋಜನೆಯ ವಲಯ ನಿಯಮಾವಳಿಗಳಿಗನುಗುಣವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸಲಾಗುತ್ತಿದೆ.

ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು:

ಕ್ರ.ಸಂ	ಅಧ್ಯಕ್ಷರು	ಸದಸ್ಯ-ಕಾರ್ಯದರ್ಶಿ	ಸದಸ್ಯರು
1.	ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ, 1965 ರನ್ವಯ ಪ್ರಾಧಿಕಾರದ ಸಭೆಯನ್ನು ವಿಚರ್ಡಿಸಿ ನಡೆಸುವುದು.	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ-4(ಹೆಚ್) ರಂತೆ ಹಾಗೂ ಸಭೆಯ ನಿರ್ಣಯದಂತೆ ಕೆಲಸ ನಿರ್ವಹಿಸುವುದು ಮತ್ತು ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.	ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವಲ್ಲಿ ಸಲಹೆ ನೀಡುವುದು.

ಕರ್ತವ್ಯ ನಿರ್ವಹಣೆಗಾಗಿ ನಿಗಧಿ ಪಡಿಸಲಾದ ಸೂತ್ರಗಳು:

ಪ್ರಾಧಿಕಾರದ ಕಾರ್ಯನಿರ್ವಹಣೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಮತ್ತು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಇತರೆ ಕಾಯ್ದೆಗಳಡಿಯಲ್ಲಿನ ಅವಕಾಶದಂತೆ ಹಾಗೂ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ಕಾಯ್ದೆಗಳನ್ನು ಪರಿಗಣಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

a. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961.
b. ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965.
c. ಕರ್ನಾಟಕ ಸಿನಿಮಾ (Regulations) ಕಾಯ್ದೆ, 1964.
d. ಕೆ.ಸಿ.ಎಸ್.ಆರ್., 1957.
e. ಮಾಹಿತಿ ಹಕ್ಕು ಕಾಯ್ದೆ, 2005.

ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು:

1. ಅನುಮೋದಿತ ಮಧ್ಯಂತರ ಮಹಾ ಯೋಜನೆಯ (Interim Master Plan) ನಕ್ಷೆಗಳು ಹಾಗೂ ವರದಿ.
2. ಅನುಮೋದಿತ ಮಹಾಯೋಜನೆಯ (ತಾತ್ಕಾಲಿಕ) (Provisional Master Plan) ನಕ್ಷೆಗಳು ಹಾಗೂ ವರದಿ.
3. ಅ ನುಮೋದಿತ ಮಹಾಯೋಜನೆಯ (ಅಂತಿಮ) ನಕ್ಷೆಗಳು ಹಾಗೂ ವರದಿ.
4. ಅನುಮೋದಿತ ವಿನ್ಯಾಸ ನಕ್ಷೆಗಳು.
5. ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು.
6. ಕಟ್ಟಡ ಕಟ್ಟಲು ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರಗಳ ಕಡತಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಕಟ್ಟಡ ಕಟ್ಟುವ ಸಂಬಂಧ ನೀಡಲಾದ ತಾಂತ್ರಿಕ ಅಭಿಪ್ರಾಯದ ಕಡತಗಳು.
7. ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದ ಕಡತಗಳು.
8. ಆಯವ್ಯಯ, ನಗದು ಪುಸ್ತಕಗಳು ಮತ್ತು ಆಸ್ತಿ ವಹಿ ದಾಸ್ತಾವೇಜು.
9. ದಾಸ್ತಾನು ಪುಸ್ತಕ.

<u>ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ಮಾಹಿತಿ ನೀಡುವ ಬಗ್ಗೆ.</u>

ಮಾಹಿತಿ ಹಕ್ಕು ಅಧಿನಿಯಮ, 2005 ಮತ್ತು ನಿಯಮಗಳ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ಸಾರ್ವಜನಿಕ ಮಾಹಿತಿ ಕುರಿತಂತೆ ಈ ಮುಂದಿನ ಪ್ರಾಧಿಕಾರಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

1. ಸಕ್ಷಮ ಪ್ರಾಧಿಕಾರ – ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
2. ಮೇಲ್ಮನವಿ ಪ್ರಾಧಿಕಾರ – ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ಅಂತರ್‌ಜಾಲ (Website):

ಹೊಸಕೋಟೆ ಯೋಜನಾ ಪ್ರಾಧಿಕಾರದ ಮಾಹಿತಿಯು ಅಂತರ್‌ಜಾಲ (Website) www.hoskote.tpa.gov.in ದಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರದ ಸಾರ್ವಜನಿಕವಾಗಿ ಅವಶ್ಯಕವಾದ ಮಾಹಿತಿ ಲಭ್ಯವಿರುತ್ತದೆ ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ.

ಮಹಾ ಯೋಜನೆ–2031 (Master Plan-2031):

ದಿನಾಂಕ: 22.07.2017 ರಂದು ನಡೆದ ಪ್ರಾಧಿಕಾರದ 70 ನೇ ಸಾಮಾನ್ಯ ಸಭೆಯಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾದ ಮಹಾಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಂತರ ಯೋಜನಾ ಕಾಯ್ದೆ, 1961 ರ ಕಲಂ 13(3) ರಡಿ ಸರ್ಕಾರದ ಅಂತಿಮ ಅನುಮೋದನೆಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಗಿದ್ದು, ಅದರಂತೆ ದಿನಾಂಕ: 28.08.2017 ರಂದು ಅಂತಿಮಗೊಳಿಸಿದ ಮಹಾಯೋಜನೆ–2031 ಕ್ಕೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾದ ಮಹಾಯೋಜನೆಗೆ ಕೆಲವೊಂದು ನಿಬಂಧನೆಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(3) ರ ಅಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 30.01.2018 ರಂದು ಸರ್ಕಾರದಿಂದ ಅಂತಿಮ ಅನುಮೋದನೆ ನೀಡಲಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(4) ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965, ರ ನಿಯಮ 44 ರಡಿಯಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಅಂತಿಮ ಮಹಾಯೋಜನೆ ಯನ್ನು ಅನುಷ್ಠಾನಗೊಳಿಸುವ ಕುರಿತು ದಿನಾಂಕ: 06.02.2018 ರಂದು ಈ ಪ್ರಾಧಿಕಾರದಿಂದ ಸಾರ್ವಜನಿಕರ ಮಾಹಿತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯು ದಿನಾಂಕ: 08.02.2018 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.

ದಿನಾಂಕ: 09.02.2018 ರಂದು ನಡೆದ ಪ್ರಾಧಿಕಾರದ 73 ನೇ ಸಭೆಯಲ್ಲಿ (ವಿಶೇಷ) ಸರ್ಕಾರದಿಂದ ಅಂತಿಮ ಅನುಮೋದನೆಯಾದ ಮಹಾಯೋಜನೆಯನ್ನು ಸಾರ್ವಜನಿಕರಿಗೆ ವೀಕ್ಷಣೆಗಾಗಿ ಹಾಗೂ ಅನುಷ್ಠಾನಗೊಳಿಸುವ ಬಗ್ಗೆ ಮತ್ತು ಭೂ ಉಪಯೋಗದ ನಕ್ಷೆಗಳು, ವಲಯ ನಿಯಮಾವಳಿಗಳು ಹಾಗೂ

ವರದಿಗಳ ಪ್ರತಿಗಳಿಗೆ ಸಾರ್ವಜನಿಕರಿಂದ ಬೇಡಿಕೆ ಬಂದಲ್ಲಿ, ಸದರಿ ಪ್ರತಿಗಳ ಹಾರ್ಡ್ / ಸಾಫ್ಟ್ ಕಾಪಿ ಪ್ರತಿಗಳಿಗೆ ತಗಲುವ ಶುಲ್ಕಗಳನ್ನು ಪಾವತಿಸಿಕೊಂಡು ಸಾರ್ವಜನಿಕರಿಗೆ ಒದಗಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಸದರಿ ಸಭೆಯ ನಿರ್ಣಯದಂತೆ ಸದರಿ ಮಹಾಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರಕಟಣೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ಸದರಿ ಅಂತಿಮ ಮಹಾಯೋಜನೆಯನ್ನು ಸಾರ್ವಜನಿಕರ ವೀಕ್ಷಣೆಗಾಗಿ ಪ್ರಾಧಿಕಾರದ ಕಛೇರಿಯಲ್ಲಿ ಇಡಲಾಗಿರುತ್ತದೆ.

ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:

ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತು ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಪ್ರಾಧಿಕಾರದ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

1. **ಭೂ ಪರಿವರ್ತನೆ:** ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಇರುವ ಜಮೀನುಗಳಿಗೆ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡಲು, ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಸರ್ಕಾರದಿಂದ ಅನುಮೋದನೆಯಾದ ಮಹಾ ಯೋಜನೆ **(Master Plan)** ಯ ಭೂ ಉಪಯೋಗ ಹಾಗೂ ವಲಯ ನಿಯಮಾವಳಿಗಳಂತೆ ಪರಿಶೀಲಿಸಿ ತಾಂತ್ರಿಕ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಆದರೆ, ಸರ್ಕಾರದ (ನಡವಳಿಗಳು) ಆದೇಶ ಸಂಖ್ಯೆ: ಆರ್.ಡಿ. 67 ಎಲ್‌ಜಿಪಿ 2018 ಬೆಂಗಳೂರು ದಿನಾಂಕ: 18.02.2019ರ ಆದೇಶದಲ್ಲಿ ಭೂ ಪರಿವರ್ತನೆ ವಿಧಾನವನ್ನು ಸರಳೀಕರಿಸಿ ಕೈಗೊಳ್ಳಬೇಕಾದ ಕ್ರಮಗಳನ್ನು ಆದೇಶದಲ್ಲಿ ಉಲ್ಲೇಖಿಸಿದ್ದು, ದಿನಾಂಕ: 01.03.2019 ರಿಂದ ಆನ್‌ಲೈನ್ ಮೂಲಕ ಸಹ ಪ್ರಸ್ತಾವನೆಗಳನ್ನು ಕಂದಾಯ ಇಲಾಖೆಯಿಂದ ಸ್ವೀಕರಿಸಲಾಗುತ್ತಿದೆ.

   ಪ್ರಸ್ತುತ 2019–20 ನೇ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರಕ್ಕೆ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಮಾಡುವ ಬಗ್ಗೆ ಅಂಚೆ ಮೂಲಕ ಒಟ್ಟು 36 ಹಾಗೂ ಆನ್‌ಲೈನ್ ಮುಖಾಂತರ ಒಟ್ಟು 883 ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟಾರೆಯಾಗಿ **919** ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡಲು ಕೋರಲಾಗಿದೆ. 2018–19 ನೇ ಸಾಲಿನಲ್ಲಿ ಬಾಕಿ ಇದ್ದ 21 ಪ್ರಕರಣಗಳು ಸೇರಿ (ಒಟ್ಟು 940) ಕೋರಲಾದ ಪ್ರಕರಣಗಳಲ್ಲಿ ಪರಿಗಣಿಸಲು **679** ಕ್ಕೆ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ. **238** ಪ್ರಕರಣಗಳಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಅಭಿಪ್ರಾಯ ನೀಡಲಾಗಿದೆ. ಉಳಿದ 23 ಪ್ರಕರಣಗಳು ಪರಿಶೀಲನಾ ಹಂತದಲ್ಲಿದೆ.

2. **ವಿನ್ಯಾಸ ಅನುಮೋದನೆ:** ಪ್ರಾಧಿಕಾರದಿಂದ ಭೂ ಪರಿವರ್ತನೆಗೆ ಅಭಿಪ್ರಾಯ ನೀಡಿದ ನಂತರ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆಗೊಳಿಸಿದ ಆದೇಶವನ್ನು ಜಾರಿಗೊಳಿಸುತ್ತಾರೆ. ತದನಂತರ, ಭೂ ಪರಿವರ್ತನಾ ಆದೇಶದ ಜೊತೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನೆ ಕೋರಿ

ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಗಳನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು ಈ ಮುಂದಿನಂತೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸಲಾಗುತ್ತಿದೆ.

ಅ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಂತೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ನ.ಅ.ಇ.112 ಬೆಂರೂಪ್ರಾ 2005 ದಿನಾಂಕ: 26.05.2005 ರ ಮಾರ್ಗಸೂಚಿಯಂತೆ ವಿನ್ಯಾಸವನ್ನು ಅನುಮೋದಿಸಿ ಶೇ. 60 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲಾಗುತ್ತಿತ್ತು. ನಂತರ ಅನುಮೋದನೆ ಪಡೆದ ವಿನ್ಯಾಸದಂತೆ ಅರ್ಜಿದಾರರು ಎಲ್ಲಾ ವಿಧದಲ್ಲಿಯೂ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ನಂತರ ಸಂಬಂಧಿಸಿದ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರು ಪಡಿಸಿ, ವಿನ್ಯಾಸದಲ್ಲಿನ ಉಳಿದ ಶೇ. 40 ರಷ್ಟು ನಿವೇಶನಗಳ ಬಿಡುಗಡೆಗಾಗಿ ಕೋರಿ ಅರ್ಜಿ ಸಲ್ಲಿಸಿದ ನಂತರ, ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತ ಪಡಿಸಿಕೊಂಡ ನಂತರ ಉಳಿದ ಶೇ. 40 ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿತ್ತು (ಶೇ. 60:40 ರಂತೆ)

ಆ) ವಿನ್ಯಾಸ ಅನುಮೋದನೆ ಆದೇಶವನ್ನು ಮಾರ್ಪಡಿಸಿ ಹೊರಡಿಸಲಾದ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 599 ಮೈಅಪ್ರಾ 2012, ದಿನಾಂಕ: 03.12.2012 ರನ್ವಯ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು ವಿನ್ಯಾಸ ನಕ್ಷೆಯಲ್ಲಿನ ಮೊದಲನೇ ಹಂತವಾಗಿ ಶೇ. 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿ ನಂತರ ಬಡಾವಣೆಯ ಭೌತಿಕ ಅಭಿವೃದ್ಧಿಗೆ ಅನುಸಾರವಾಗಿ ಎರಡನೇ ಹಂತದಲ್ಲಿ ಶೇ. 30 ಹಾಗೂ ಬಡಾವಣೆಯ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡ ನಂತರ ಮೂರನೇ ಹಂತದಲ್ಲಿ ಶೇ. 30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿತ್ತು. ಈ ರೀತಿ ವಿನ್ಯಾಸಗಳನ್ನು (ಶೇ.40:30:30 ರಂತೆ) ಅನುಮೋದಿಸಲಾಗುತ್ತಿತ್ತು.

ಇ) ಪ್ರಸ್ತುತ ಕರ್ನಾಟಕ ರಾಜ್ಯ ಪತ್ರದಲ್ಲಿ ವಿನ್ಯಾಸ ಅನುಮೋದನೆ ಆದೇಶವನ್ನು ಮಾರ್ಪಡಿಸಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ ವಿನ್ಯಾಸಗಳನ್ನು ವಲಯ ನಿಯಮಾವಳಿಯಂತೆ ಪರಿಶೀಲಿಸಿ, ಸಭೆಯ ನಿರ್ಣಯದನ್ವಯ ಅಭಿವೃದ್ಧಿ ಪಡಿಸುವ ಸಂಬಂಧ ಅರ್ಜಿದಾರರು / ಅಭಿವೃದ್ಧಿದಾರರಿಗೆ ನೀಡಲಾಗುತ್ತಿದೆ. ಅರ್ಜಿದಾರರು/ ಅಭಿವೃದ್ಧಿದಾರರು ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂದಿಸಿದ ನಿರಾಕ್ಷೇಪಣಾ ಪತ್ರಗಳೊಂದಿಗೆ ಮನವಿ ಸಲ್ಲಿಸಿದ್ದಲ್ಲಿ, ಮತ್ತೊಮ್ಮೆ ಪರಿಶೀಲಿಸಿ ಸಭೆಯ ನಿರ್ಣಯದೊಂದಿಗೆ ವಿನ್ಯಾಸದಲ್ಲಿ ನಿವೇಶನಗಳನ್ನು ಬಿಡುಗಡೆಗಳಿಸಿ ಅನುಮೋದಿಸಲಾಗುತ್ತಿದೆ. 2019-20 ನೇ ಸಾಲಿನಲ್ಲಿ ವಸತಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ಹಾಗೂ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲಾದ ನಂತರ ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ನಿಬಂಧನೆಗೊಳಪಟ್ಟು ವಸತಿ ವಿನ್ಯಾಸ ನಕ್ಷೆಗಳಿಗೆ ತಾತ್ಕಾಲಿಕ

ಅನುಮೋದನೆ ನೀಡಲಾಗುತ್ತಿದೆ. 2019-20 ನೇ ಸಾಲಿನಲ್ಲಿ ಒಟ್ಟು 05 ತಾತ್ಕಾಲಿಕ ವಸತಿ ವಿನ್ಯಾಸಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ ಸಾಲಿನಲ್ಲಿ ಒಟ್ಟು 03 ವಸತಿ ವಿನ್ಯಾಸಗಳಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ ಹಿನ್ನೆಲೆಯಲ್ಲಿ ಅರ್ಜಿದಾರರ ಕೋರಿಕೆಯಂತೆ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ಶೇ 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

3) **ಇ-ವಿನ್ಯಾಸ:** ರಾಜ್ಯದ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 12278/2007 ರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದಂತೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸ್ಥಳೀಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಹಿಂದೆ ಅನುಮೋದನೆಯಾದ ವಸತಿ ವಿನ್ಯಾಸಗಳನ್ನು ಇ-ವಿನ್ಯಾಸ ತಂತ್ರಾಂಶವನ್ನು ಉಪಯೋಗಿಸಿ (ಕಾವೇರಿ ತಂತ್ರಾಂಶ) ವಿನ್ಯಾಸಗಳನ್ನು ಅನುಮೋದಿಸುವ ಸಂಬಂಧ ದಿನಾಂಕ: 08.10.2013 ರ ವರೆಗೆ ಅನುಮೋದಿಸಲಾಗಿರುವ ವಿನ್ಯಾಸಗಳನ್ನು ಇ-ತಂತ್ರಾಶದ ಅಡಿಯಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ತದನಂತರ ಹೊಸದಾಗಿ ಅನುಮೋದಿಸಲಾಗುತ್ತಿರುವ ವಿನ್ಯಾಸಗಳನ್ನು ನೇರವಾಗಿ ಇ-ವಿನ್ಯಾಸ ತಂತ್ರಾಂಶವನ್ನು ಉಪಯೋಗಿಸಿ ವಿನ್ಯಾಸಗಳನ್ನು ಅನುಮೋದಿಸಲಾಗುತ್ತಿದ್ದು, ನಂತರ ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಆನ್ ಲೈನ್ ತಂತ್ರಾಂಶದ ಮುಖಾಂತರ ಭೂಮಿ, ಕಟ್ಟಡ ನಕ್ಷೆ ಮತ್ತು ವಿನ್ಯಾಸ ನಕ್ಷೆಗಳ ಅನುಮೋದನಾ ವ್ಯವಸ್ಥೆ (LBPAS): LBPAS ಅರ್ಜಿಗಳನ್ನು ಸ್ವೀಕರಿಸುವುದರಿಂದ ಪ್ರಮಾಣ ಪತ್ರ ನೀಡುವವರೆಗೂ ತಂತ್ರಾಂಶವನ್ನು ಬಳಸಿ ಭೂಮಿ, ಕಟ್ಟಡ ನಕ್ಷೆ ಹಾಗೂ ವಿನ್ಯಾಸ ನಕ್ಷೆ ಅನುಮೋದನೆಗಳನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರವು ದಿನಾಂಕ: 13.06.2019 ರಂದು ಭೂಮಿ, ಕಟ್ಟಡ ಮತ್ತು ವಿನ್ಯಾಸ ನಕ್ಷೆ ಅನುಮೋದನೆ ನೀಡುವ ತಂತ್ರಾಶದ ವೆಬ್‌ಸೈಟ್ ಅನ್ನು ಬಿಡುಗಡೆ ಮಾಡಲಾಗಿರುತ್ತದೆ. ಆನ್‌ಲೈನ್ ತಂತ್ರಾಂಶವನ್ನು ಬಳಸಿ ಅನುಮೋದಿತ ಮಹಾಯೋಜನೆ ಹಾಗೂ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವ ಬಗ್ಗೆ ಸ್ವಯಂ ಚಾಲಿತ ತಂತ್ರಾಂಶವನ್ನು ಬಳಸಿ ಪರಿಶೀಲಿಸಿ ಕನಿಷ್ಠ ಹಸ್ತಕ್ಷೇಪಗಳೊಂದಿಗೆ ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಮಾಹಿತಿ / ದತ್ತಾಂಶಗಳನ್ನು ಪಡೆದು ವಿಳಂಬವಿಲ್ಲದೆ ಅನುಮೋದನೆ ನೀಡಲು ಅನುಕೂಲವಾಗುವ ವ್ಯವಸ್ಥೆ ಜಾರಿಯಾಗಿದ್ದು, ಪ್ರಸ್ತುತವಾಗಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡುವ ಕಾರ್ಯ ಪ್ರಾರಂಭವಾಗಿದ್ದು, LBPAS ತಂತ್ರಾಂಶದಲ್ಲಿ ನಗರಸಭೆಯಿಂದ ಈ ಕಛೇರಿಗೆ ಬರುವ ಪ್ರಸ್ತಾವನೆಗಳಿಗೆ ತಾಂತ್ರಿಕವಾಗಿ ಪರಿಶೀಲಿಸಿ ಸದರಿ ತಂತ್ರಾಂಶದಲ್ಲಿಯೇ ಅನುಮೋದನೆ ನೀಡಿ ಮುಂದಿನ ಕ್ರಮಕ್ಕಾಗಿ ನಗರಸಭೆಗೆ ರವಾನಿಸಲಾಗುತ್ತಿದೆ. 2019-20 ನೇ ಸಾಲಿನಲ್ಲಿ ಒಟ್ಟು 44 ಕಟ್ಟಡ ನಕ್ಷೆ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಕೋರಿ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ಒಟ್ಟು 21 ಅರ್ಜಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ ನೀಡಲಾಗಿದ್ದು, 03 ಪ್ರಕರಣಗಳಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಅಭಿಪ್ರಾಯ ನೀಡಲಾಗಿದೆ. ಉಳಿದ 23 ಪ್ರಕರಣಗಳು ಪರಿಶೀಲನಾ ಹಂತದಲ್ಲಿದ್ದು, ಭೂಮಿ ಹಾಗೂ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು LBPAS ತಂತ್ರಾಂಶದಲ್ಲಿ

ಅನುಮೋದಿಸುವ ವ್ಯವಸ್ಥೆ ಈವರೆಗೆ ಪ್ರಾರಂಭವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದು.

ಕಡತಗಳ ಚಲನೆ ಪ್ರಕ್ರಿಯೆಯನ್ನು ಸ್ವಯಂ ಚಾಲಿತಗೊಳಿಸಿ ಪಾರದರ್ಶಕತೆಯೊಂದಿಗೆ ಸೇವೆಯ ಗುಣಮಟ್ಟವನ್ನು ನಿರ್ದಿಷ್ಟವಾದ ಪ್ರಮಾಣದಲ್ಲಿ ಒದಗಿಸುವ ಸಂಬಂಧ ಹಾಗೂ ಪ್ರಮಾಣ ಪತ್ರಗಳಲ್ಲಿ ಯಾವುದೇ ದೋಷಗಳಿರದಂತೆ ಡಿಜಿಟಲ್ ಸಹಿ ಮುಖಾಂತರ ನೀಡುವುದಕ್ಕೆ ಅನುಕೂಲವಾಗುವ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದು.

4) **ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ:** ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಲು ಉದ್ದೇಶಿಸಲಾದಂತಹ ಕಟ್ಟಡಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರಂತೆ ಪ್ರಾರಂಭಿಕ ಪ್ರಮಾಣ ಪತ್ರಕ್ಕಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ಬಂದ ಅರ್ಜಿಗಳನ್ನು ಅನುಮೋದಿತ ವಲಯ ನಿಯಮಾವಳಿಯಂತೆ ಪರಿಶೀಲಿಸಿದ ನಂತರ ಪ್ರಾಧಿಕಾರದಿಂದ ನೀಡಬೇಕಾದ ಉದ್ದೇಶಿತ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಿ ಮುಂದಿನ ಕ್ರಮಕ್ಕಾಗಿ ಪರವಾನಿಗೆ ನೀಡಲು ಕಡತಗಳನ್ನು ಸ್ಥಳೀಯ ಸಂಸ್ಥೆಗೆ ಕಳುಹಿಸಲಾಗುವುದು ಮತ್ತು ಸ್ಥಳೀಯ ಸಂಸ್ಥೆಯೇ ಪ್ರಾರಂಭಿಕ ಪ್ರಮಾಣ ಪತ್ರ ನೀಡಬೇಕಾದ ಪ್ರಕರಣಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಪ್ರಸ್ತಾವನೆಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ.

ಅದರಂತೆ, 2019-20 ನೇ ಸಾಲಿನಲ್ಲಿ ಒಟ್ಟು **67** ಪ್ರಕರಣಗಳನ್ನು ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳ ಪೈಕಿ 51 ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗಿದ್ದು, 09 ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಲವೊಂದು ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿ ಹಿಂಬರಹ ನೀಡಿದೆ. 04 ಪ್ರಕರಣಗಳಲ್ಲಿ ತಿರಸ್ಕರಿಸಿ ಅಭಿಪ್ರಾಯ ನೀಡಲಾಗಿದೆ. ಉಳಿದ 03 ಪ್ರಕರಣಗಳು ಪರಿಶೀಲನೆ ಹಂತದಲ್ಲಿದೆ.

5) **ಮಾಹಿತಿ ಹಕ್ಕು ಕಾಯ್ದೆ, 2005 ರಡಿ ಮಾಹಿತಿಯನ್ನು ಕೋರಿರುವ ಬಗ್ಗೆ:** ಮಾಹಿತಿ ಹಕ್ಕು ಕಾಯ್ದೆ, 2005 ರಡಿ 2019-20 ನೇ ಸಾಲಿನಲ್ಲಿ ಒಟ್ಟು 38 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಿಂದಿನ ಸಾಲಿನ ಅಂದರೆ 2018-19 ನೇ ಸಾಲಿನ 03 ಅರ್ಜಿಯನ್ನು ಒಳಗೊಂಡಂತೆ ಒಟ್ಟು 41 ಅರ್ಜಿಗಳ ಪೈಕಿ **41** ಅರ್ಜಿಗಳಿಗೆ 2019-20 ನೇ ಸಾಲಿನಲ್ಲಿ ನಿಗದಿತ ಅವಧಿಯೊಳಗೆ ಸೂಕ್ತ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ಎಲ್ಲಾ ಅರ್ಜಿಗಳಿಗೆ ಮಾಹಿತಿ ಒದಗಿಸಲು ಕ್ರಮ ವಹಿಸಲಾಗಿರುತ್ತದೆ.

6) **ಪ್ರಾಧಿಕಾರದ ಸ್ವೀಕೃತಿ ಮತ್ತು ರವಾನೆಗಳ ವಿವರ:** ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ 2019-20 ನೇ ಸಾಲಿನಲ್ಲಿ ಒಟ್ಟು 1042 ಪತ್ರಗಳು ಸ್ವೀಕೃತಿಯಾಗಿದೆ ಹಾಗೂ 1073 ಪತ್ರಗಳನ್ನು ರವಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಗಳು:

ಪ್ರಸ್ತುತ 2019-20 ನೇ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 03 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನುಸಾರ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ:

ಸರ್ಕಾರದ ಆದೇಶ ಸಂಖ್ಯೆ: 1) ನಅಇ 83 ನಯೋಸೇ 2009, ಬೆಂಗಳೂರು, ದಿನಾಂಕ: 25.06.2009, 2) ನಅಇ/203/ಬಿಎಂಆರ್/2009, ಬೆಂಗಳೂರು, ದಿನಾಂಕ: 10.08.2009, 3) ನಅಇ 257 ಬಿಎಂಆರ್ 2010, ಬೆಂಗಳೂರು, ದಿನಾಂಕ: 06.10.2010 ಮತ್ತು 4) ನಅಇ 97 ಬಿಎಂಆರ್ 2012, ಬೆಂಗಳೂರು, ದಿನಾಂಕ: 16.05.2013 ರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ ಈ ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿಯೋಜನೆಯ ಮೇಲೆ ಭರ್ತಿ ಮಾಡಲು ಸೂಚಿಸಿದೆ. ಹಾಗೂ ಸರ್ಕಾರದ ಆದೇಶ ಸಂ: ನಅಇ 93 ನಯೋಸೇ 2009, ದಿನಾಂಕ: 26.08.2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 164 ನಯೋಸೇ 2016, ದಿನಾಂಕ: 28.09.2016 ರಲ್ಲಿ ಒಬ್ಬ ನಗರ ಯೋಜಕರನ್ನು ನಿಯೋಜನೆಯ ಮೇಲೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಪ್ರಾಧಿಕಾರದ ಹಾಲಿ ಸಿಬ್ಬಂದಿಯ ವಿವರ ಈ ಕೆಳಕಂಡಂತಿದೆ.

ಕ್ರಸಂ.	ಹುದ್ದೆಯ ಪದನಾಮ	ಮಂಜೂರಾದ ಹುದ್ದೆ	ಭರ್ತಿ ಆಗಿರುವ ಹುದ್ದೆ	ಖಾಲಿ ಇರುವ ಹುದ್ದೆ
1.	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು	01	01	–
2.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01	01	–
3.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	01	–
4.	ನಗರ ಯೋಜಕರು	01	01	–
5.	ಸಹಾಯಕ ನಗರ ಯೋಜಕರು	02	–	02
ಒಟ್ಟು		**06**	**04**	**02**

ಪ್ರಸ್ತುತ 2019-20 ನೇ ಸಾಲಿನಲ್ಲಿ ಈ ಕೆಳಕಂಡ ಅಧಿಕಾರಿಗಳು ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಕ್ರ ಸಂ.	ಅಧಿಕಾರಿಗಳ ಹೆಸರು	ಹುದ್ದೆಯ ಪದನಾಮ
1.	ಶ್ರೀ ಎಂ. ಮಹದೇವ ಪ್ರಸಾದ್	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು
2.	ಶ್ರೀ ಜಿ. ಎನ್. ಪರಮೇಶ್ವರ (ದಿನಾಂಕ: 01.04.2019 ರಿಂದ 19.07.2019 ರವರೆಗೆ) ಶ್ರೀ ಸುರೇಶ್ ಹೆಚ್. (ದಿನಾಂಕ: 19.07.2019 ರಿಂದ 31.03.2020 ರವರೆಗೆ)	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು

3.	ಶ್ರೀ ಡಿ.ಟಿ. ನರಸಿಂಗರಾವ್ (ದಿನಾಂಕ: 01.04.2019 ರಿಂದ 06.11.2019 ರವರೆಗೆ) ಶ್ರೀಮತಿ ಅನಿತಾ ಬಿ.ಎಲ್. (ಪ್ರ) (ದಿನಾಂಕ: 07.11.2019 ರಿಂದ 06.12.2019 ರವರೆಗೆ) ಶ್ರೀಮತಿ ರೇವತಿ ಎ (ದಿನಾಂಕ: 07.12.2019 ರಿಂದ 31.03.2020 ರವರೆಗೆ)	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು
4.	ಶ್ರೀಮತಿ ಅನಿತ ಬಿ.ಎಲ್.	ನಗರ ಯೋಜಕರು

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಬಾಹ್ಯ ಆಕರ (Out Source) ದಿಂದ ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

ಕ್ರ.ಸಂ.	ಹುದ್ದೆಯ ವಿವರ	ನೌಕರರ ಸಂಖ್ಯೆ
1.	ತಾಂತ್ರಿಕ ಸಹಾಯಕರು	1
2.	ಎರಡನೇ ದರ್ಜೆ ಸಹಾಯಕರು	1
3.	ಡಿ.ಇ.ಓ (ದಿನಾಂಕ: 01.04.2019 ರಿಂದ 30.05.2019 ರವರೆಗೆ)	1
4.	ಗ್ರೂಪ್-ಡಿ	3
ಒಟ್ಟು		6

ಪ್ರಾಧಿಕಾರದ ವಾಹನಗಳ ವಿವರ:

ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ 2019-20 ನೇ ಸಾಲಿನಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ 01 ಎ.ಸಿ ಮತ್ತು 02 ಎ.ಸಿ. ರಹಿತ ವಾಹನಗಳನ್ನು ಮೆ॥ ಶ್ರೀ ವೀರಭದ್ರೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಂದ ಸೇವೆಯನ್ನು ಪಡೆಯಲಾಗುತ್ತಿದೆ.

ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ:

ಹೊಸಕೋಟೆ ಗ್ರಾಮದ ಸ.ನಂ. 369/1 ಮತ್ತು 370/1 ರಲ್ಲಿನ 04 ಎಕರೆ 38 ಗುಂಟೆ ಜಮೀನಿನ ಅನುಮೋದಿತ ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ 1005 ಚ.ಮೀ. ವಿಸ್ತೀರ್ಣದ ನಿವೇಶನದಲ್ಲಿ ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಿಸುವ ಸಂಬಂಧ ದಿನಾಂಕ: 24.06.2010 ರಂದು ಜರುಗಿದ 26 ನೇ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಕಛೇರಿ ಕಟ್ಟಡವನ್ನು ಅಧಿಕೃತ ಸರ್ಕಾರಿ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಲೋಕೋಪಯೋಗಿ ಇಲಾಖೆ ಸಲ್ಲಿಸಲಾದ ರೂ. 100,00,000/- (ನೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 274 ಬಿಎಂಆರ್ 2010, ಬೆಂಗಳೂರು, ದಿನಾಂಕ: 16.03.2011 ರನ್ವಯ

ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಪಡೆದು ಕಟ್ಟಡವನ್ನು ನಿರ್ಮಿಸಲಾಗಿದ್ದು, ದಿನಾಂಕ: 17.01.2013 ರಿಂದ ನೂತನ ಕಛೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ.

ಪ್ರಾಧಿಕಾರದ ಆಯವ್ಯಯ (Budget):

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1965 ರ ನಿಯಮ 22 ರನ್ವಯ ಹೊಸಕೋಟೆ ಯೋಜನಾ ಪ್ರಾಧಿಕಾರದ 2020–21 ನೇ ಸಾಲಿನ ಆಯವ್ಯಯವನ್ನು ತಯಾರಿಸಿ ದಿನಾಂಕ: 26.02.2020 ರಂದು ನಡೆದ ಪ್ರಾಧಿಕಾರದ 81ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಸಭೆಯ ಅನುಮೋದನೆ ಪಡೆದು ಆಯವ್ಯಯವನ್ನು ಅನುಮೋದನೆಗಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 447 ಮೈಅಪ್ರಾ 2016, ದಿನಾಂಕ: 19.04.2017 ರಲ್ಲಿನ ನಿರ್ದೇಶನದಂತೆ ದಿನಾಂಕ: 23.03.2020 ರಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ರವರಿಗೆ ಸಲ್ಲಿಸಲಾಗಿರುತ್ತದೆ.

ಪ್ರಾಧಿಕಾರದ ಹಣಕಾಸಿನಲ್ಲಿ ವಿವಿಧ ಇಲಾಖೆಗಳಿಂದ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳು:

ಅ) ಸರ್ಕಾರದ ಆದೇಶ ಸಂಖ್ಯೆ: ನಅಇ 149 ಬಿಎಂಆರ್ 2015, ದಿನಾಂಕ: 02.03.2016 ರನ್ವಯ ಹೊಸಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮಗಳಲ್ಲಿ ಓ.ಹೆಚ್.ಟಿ. ನಿರ್ಮಾಣ ಕಾಮಗಾರಿಗಳಿಗೆ ಒಟ್ಟು ರೂ. 1.0 ಕೋಟಿ ವೆಚ್ಚದಲ್ಲಿ ಹಾಗೂ ಹೊಸಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮಗಳಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ. 5.50 ಕೋಟಿ ವೆಚ್ಚದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ರವರಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಆದೇಶಿಸಲಾಗಿರುತ್ತದೆ. ಅದರಂತೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ರವರ ಮುಖಾಂತರ ಕಾಮಗಾರಿಗಳನ್ನು ಕೈಗೊಂಡು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಮೊತ್ತವನ್ನು ಪ್ರಾಧಿಕಾರದ ಹಣಕಾಸಿನ ನಿಧಿಯಿಂದ ಪಾವತಿಸಲಾಗಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ: ನಅಇ 47 ಬಿಎಂಆರ್ 2017, ದಿನಾಂಕ: 25.05.2017 ರನ್ವಯ ಹೊಸಕೋಟೆ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗೂ ಹೊಸಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ / ಡ್ರೈನೇಜ್‌ಗಳ ಮತ್ತು ನೀರಿನ ಟ್ಯಾಂಕ್ (ಓ.ಹೆಚ್.ಟಿ) ಕಾಮಗಾರಿಗಳಿಗೆ ಒಟ್ಟು ರೂ. 9.75 ಕೋಟಿ ವೆಚ್ಚದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ರವರಿಂದ ಹಾಗೂ ಲೋಕೋಪಯೋಗಿ ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಆದೇಶಿಸಲಾಗಿರುತ್ತದೆ. ಅದರಂತೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಹಾಗೂ ಲೋಕೋಪಯೋಗಿ, ಬಂದರು, ಒಳನಾಡು, ಜಲಸಾರಿಗೆ ಇಲಾಖೆ, ಬೆಂಗಳೂರು ರವರ ಮುಖಾಂತರ ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಬಹುತೇಕ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಅದಕ್ಕೆ ಸಂಬಂಧಿಸಿದ ಭಾಗಶಃ ಮೊತ್ತವನ್ನು ಪ್ರಾಧಿಕಾರದ ಹಣಕಾಸಿನ ನಿಧಿಯಿಂದ ಪಾವತಿಸಲಾಗಿರುತ್ತದೆ.

ಇ) ಸರ್ಕಾರದ ಆದೇಶ ಸಂಖ್ಯೆ: ನಅಇ 127 ಬಿಎಂಆರ್ 2017, ದಿನಾಂಕ: 25.10.2017 ರನ್ವಯ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇರುವ 16 ಗ್ರಾಮಗಳಲ್ಲಿ ಮತ್ತು ಹೊಸಕೋಟೆ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾಗೂ ಹೊಸಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ / ಡ್ರೈನೇಜ್‌ಗಳ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಕಾಮಗಾರಿಗಳಿಗೆ ಒಟ್ಟು ರೂ. 8.42 ಕೋಟಿ ವೆಚ್ಚದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ರವರಿಂದ ಹಾಗೂ ಲೋಕೋಪಯೋಗಿ ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಆದೇಶಿಸಲಾಗಿರುತ್ತದೆ. ಅದರಂತೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಹಾಗೂ ಲೋಕೋಪಯೋಗಿ, ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರ ಮುಖಾಂತರ ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಬಹುತೇಕ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಅದಕ್ಕೆ ಸಂಬಂಧಿಸಿದ ಭಾಗಶಃ ಮೊತ್ತವನ್ನು ಪ್ರಾಧಿಕಾರದ ಹಣಕಾಸಿನ ನಿಧಿಯಿಂದ ಪಾವತಿಸಲಾಗಿರುತ್ತದೆ.

ಈ) ಸರ್ಕಾರದ ಆದೇಶ ಸಂಖ್ಯೆ: ನಅಇ 46 ಬಿಎಂಆರ್ 2018, ದಿನಾಂಕ: 26.03.2018 ರನ್ವಯ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿ, ಮುತ್ಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ ಹಾಗೂ ಹೊಸಕೋಟೆ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ. 70 ಲಕ್ಷ ವೆಚ್ಚದಲ್ಲಿ ಲೋಕೋಪಯೋಗಿ ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಆದೇಶಿಸಲಾಗಿರುತ್ತದೆ. ಅದರಂತೆ, ಲೋಕೋಪಯೋಗಿ, ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರ ಮುಖಾಂತರ ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಅದಕ್ಕೆ ಸಂಬಂಧಿಸಿದ ಮೊತ್ತವನ್ನು ಪ್ರಾಧಿಕಾರದ ಹಣಕಾಸಿನ ನಿಧಿಯಿಂದ ಪಾವತಿಸಲಾಗಿರುತ್ತದೆ.

ಉ)ಸರ್ಕಾರದ ಆದೇಶ ಸಂಖ್ಯೆ: ನಅಇ 09 ಬಿಎಂಆರ್ 2019, ಬೆಂಗಳೂರು, ದಿನಾಂಕ: 27.02.2019 ರನ್ವಯ ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹಣದಲ್ಲಿ ಟೆಂಡರ್ ಪ್ರಿಮಿಯಂ ಹೊರತುಪಡಿಸಿ ಒಟ್ಟು ರೂ. 548 ಲಕ್ಷಗಳಿಗೆ (ಐನೂರು ನಾಲವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಲವೊಂದು ಷರತ್ತುಗಳಿಗೊಳಪಟ್ಟು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಕೈಗೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68ಎ (2)(ಸಿ) ರಡಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ, ಲೋಕೋಪಯೋಗಿ, ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರ ಮುಖಾಂತರ ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಬಹುತೇಕ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಅದಕ್ಕೆ ಸಂಬಂಧಿಸಿದ ಬಹುತೇಕ ಮೊತ್ತವನ್ನು ಪ್ರಾಧಿಕಾರದ ಹಣಕಾಸಿನ ನಿಧಿಯಿಂದ ಪಾವತಿಸಲಾಗಿರುತ್ತದೆ.

ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು:

2019–20 ನೇ ಸಾಲಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ತಿಂಗಳು	ಆದಾಯ (ಠೇವಣಿ ನಗದೀಕರಣ ಒಳಗೊಂಡಂತೆ) ರೂ.ಗಳಲ್ಲಿ	ವೆಚ್ಚ (ಠೇವಣಿ ಹೂಡಿಕೆ ಒಳಗೊಂಡಂತೆ) ರೂ.ಗಳಲ್ಲಿ
ಪ್ರಾರಂಭಿಕ ಶಿಲ್ಕು ರೂ.		**1,15,92,595**	
01.	ಏಪ್ರಿಲ್–19	12,82,443	4,97,581
02.	ಮೇ–19	59,62,595	18,74,003
03.	ಜೂನ್–19	35,49,058	5,64,815
04.	ಜುಲೈ–19	4,51,521	7,61,205
05.	ಆಗಸ್ಟ್–19	66,61,055	6,39,127
06	ಸೆಪ್ಟೆಂಬರ್–19	85,689	1,07,59,067
07.	ಅಕ್ಟೋಬರ್–19	91,66,499	2,31,41,250
08.	ನವೆಂಬರ್–19	26,98,73,026	26,97,45,100
09.	ಡಿಸೆಂಬರ್–19	1,42,80,639	4,87,831
10.	ಜನವರಿ–20	1,01,04,111	1,90,15,925
11.	ಫೆಬ್ರವರಿ–20	13,08,26,982	57,26,817
12.	ಮಾರ್ಚ್–20	29,10,367	6,70,954
		ಅಂತಿಮ ಶಿಲ್ಕು ರೂ.	**13,28,62,905**

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

FORM V

Balance Sheet of the Hoskote Planning Authority as at the end of 31st March 2020

Liabilities	Amount (Rs.)	Assets	Amount (Rs.)/ Extent
1. Amount received from Government by way of		1. a) CA Sites – 117 Nos.	1,43,220 sq. Mts
		b) Office Building (Book value)	100,00,000
(i) Loans	-	2. Tools and plant	7,20,000
(ii) Advances	-	3. Advances (recoverable)	-
(iii) Grants	-	4. Other items of assets	-
2. Outstanding liabilities a) Lake cess	15,84,64,874	5. a) Cash on hand	-
b) Security Deposit	6,99,87,641	b) Cash at Bank	13,30,22,929
c) Cess & Sur charges (01% of G.V)	8,90,163	c) Deposits	24,99,99,988
d) Development Works	2,94,50,267	-	-
3. Other Administrative Liabilities		6. Imprest	-
a) 05% of the STPB Contribution	6,50,000	-	-
b) Pension & Leave Contribution	30,00,000	-	-
c) Audit Fee	21,00,000	-	-
3. Excess of income over expenditure	-	-	-
Total	**26,45,42,945**	**Total (Rs.) A**	**39,37,42,917**
-	-	**Total (CA Land Extent) B**	**1,43,220 sq. Mts**

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು.
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ಅನುಬಂಧ-1

ಹೊಸಕೋಟೆ ಯೋಜನಾ ಪ್ರಾಧಿಕಾರದ 2018-19 ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರ

ಕ್ರ ಸಂ	ಸ್ವೀಕೃತಿ	ಮೊತ್ತ	ಖರ್ಚು	ಮೊತ್ತ
1	ದಿ: 01.04.2018 ಕ್ಕೆ ಪ್ರಾರಂಭಿಕ ಶೀಲ್ಕು	**7,73,55,629**	ಅಧಿಕಾರಿಗಳ ವೇತನ ಮತ್ತು ಡಿ.ಎ	34,28,610
2	ಬ್ಯಾಂಕ್ ಬಡ್ಡಿ	75,79,049	ಅಧ್ಯಕ್ಷರ ಗೌರವ ಧನ/ಭತ್ಯೆ	49,645
3	ಪರಿಶೀಲನಾ ಶುಲ್ಕ & ಉಸ್ತುವಾರಿ ಶುಲ್ಕ	1,19,033	ಹೊರ ಗುತ್ತಿಗೆ ನೌಕರರ ವೇತನ	8,67,117
4	ಕಟ್ಟಡ / ನಿವೇಶನ ಅನುಮೋದನೆ ಶುಲ್ಕ	11,84,594	ಕಛೇರಿ ಉಪಯೋಗಕ್ಕೆ ಪಡೆದಿರುವ ವಾಹನಗಳ ಬಾಡಿಗೆ	8,70,845
5	ಉತ್ತಮತೆ / ವಿನ್ಯಾಸ ಅನುಮೋದನೆ ಶುಲ್ಕ	85,53,513	ಸೆಕ್ಯೂರಿಟಿ ಗಾರ್ಡ್‌ಗಳ ವೇತನ	2,76,120
6	ಭದ್ರತಾ ಠೇವಣಿ	60,70,402	ವಿದ್ಯುತ್ ಬಿಲ್	63,457
7	ಕೆರೆ ಅಭಿವೃದ್ಧಿ ಶುಲ್ಕ	1,05,26,425	ಹೂಡಿಕೆ ಮಾಡಲಾದ ಮೊತ್ತ	38,00,00,000
8	ಮಹಾ ಯೋಜನೆಯ ನಕ್ಷೆಗಳ ಮಾರಾಟ	84,850	ದೂರವಾಣಿ ಬಿಲ್	23,643
9	ಅರ್ಜಿ/ಐ.ಪಿ.ಓ ಶುಲ್ಕ	9,592	ಪ್ರಕಟಣಾ ಶುಲ್ಕ	2,14,180
10	ಮಹಾ ಯೋಜನೆಯ ಸಿ.ಡಿ. ಮಾರಾಟ	20,967	ಬ್ಯಾಂಕ್ ವೆಚ್ಚ	3,029
11	ಮಹಾ ಯೋಜನೆಯ ವಲಯ ನಿಯಮಾವಳಿಗಳ ಮಾರಾಟ	7,024	ಇ.ಪಿ.ಬಿ.ಎ.ಎಕ್ಸ್ ಅನ್ನು ರಿಪೇರಿ ಮಾಡಲು ಭರಿಸಲಾದ ವೆಚ್ಚ	8,295
12	ಹೂಡಿಕೆ ನಗದೀಕರಣ ಮೊತ್ತ (ಬಡ್ಡಿ ಸೇರಿ)	39,02,18,284	ಅಭಿವೃದ್ಧಿ ಕಾಮಗಾರಿಗಳಿಗೆ ಪಾವತಿಸಲಾದ ವೆಚ್ಚ	12,58,02,617
13	ದೃಢೀಕೃತ ನಕಲು	13,800	ಕಛೇರಿ ಸ್ವಚ್ಛತೆ	36,000
14	ಪ್ರಕಟಣಾ ಶುಲ್ಕ	80,000	ಸ್ಟಾಂಪ್ ಖರೀದಿ	10,000
15	ಸಿ.ಎ ನಿವೇಶನದ ಗುತ್ತಿಗೆ ಮೊತ್ತ	2,29,31,900	ದಿನ ಪತ್ರಿಕೆಗಳ ಖರೀದಿ	2,220
16	ಅಧ್ಯಕ್ಷರ ಗೌರವ ಭತ್ಯೆಯ ಮೊತ್ತವು ಹಿಂದಿರುಗಿರುವುದು	9,145	ಪ್ರಾಧಿಕಾರದ ವಕೀಲರಿಗೆ ಪಾವತಿಸಲಾದ ಬಿಲ್ಲಿನ ಮೊತ್ತ	1,10,000
17	ಇತರೆ ಮೊತ್ತ	20,174	ಪ್ರಾಧಿಕಾರದ ವೆಬ್ ಸೈಟ್ ಅನ್ನು ಅಪ್ ಡೇಟ್ ಮಾಡಿಸಲು ಭರಿಸಲಾದ ವೆಚ್ಚ	23,000
18	-	-	ಕೆ.ಎಸ್.ಟಿ.ಪಿ.ಬಿ. ರವರಿಗೆ ಶೇ5 ರಷ್ಟು ಮೊತ್ತವನ್ನು ಪಾವತಿಸಿರುವುದು	8,14,593

19			ಪ್ರಾಧಿಕಾರಕ್ಕೆ ಮಹಾಯೋಜನೆಯ ನಕ್ಷೆಗಳನ್ನು ಮುದ್ರಿಸಲು ಭರಿಸಲಾದ ವೆಚ್ಚ	2,71,186
20	–	–	ಪ್ರಾಧಿಕಾರದ ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಪಾವತಿಸಲು ಭರಿಸಲಾದ ವೆಚ್ಚ	30,200
21	–	–	ಕಛೇರಿಯ ಇತರೆ ವೆಚ್ಚಗಳಿಗಾಗಿ ಭರಿಸಲಾದ ವೆಚ್ಚ	74,432
22	–	–	ಪ್ರಾಧಿಕಾರದ ಸದಸ್ಯರುಗಳಿಗೆ ಭರಿಸಲಾದ ಗೌರವ ಭತ್ಯೆಯ ಮೊತ್ತ	41,710
–	–	–	ಮುದ್ರಣ ವೆಚ್ಚ	1,70,887
–	–	–	**ಒಟ್ಟು (ಎ)**	**51,31,91,786**
–	–	–	**ದಿ: 31.03.2019 ಕ್ಕೆ ಅಂತಿಮ ಶಿಲ್ಕು (ಬಿ)**	**1,15,92,595**
ಒಟ್ಟು ರೂ.		**52,47,84,381**	**ಒಟ್ಟು ರೂ. (ಎ+ಬಿ)**	**52,47,84,381**

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ಅನುಬಂಧ-2

ಹೊಸಕೋಟೆ ಯೋಜನಾ ಪ್ರಾಧಿಕಾರದ 2019-20 ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರ

ಕ್ರ ಸಂ	ಸ್ವೀಕೃತಿ	ಮೊತ್ತ	ಖರ್ಚು	ಮೊತ್ತ
1	ದಿ: 01.04.2019 ಕ್ಕೆ ಪ್ರಾರಂಭಿಕ ಶೀಲ್ಕು	**1,15,92,595**	ಹೂಡಿಕೆ ಮಾಡಲಾದ ಮೊತ್ತ	26,00,00,000
2	ಹೂಡಿಕೆ ನಗದೀಕರಣ ಮೊತ್ತ	38,00,00,000	ಅಧಿಕಾರಿಗಳ ವೇತನ ಮತ್ತು ಡಿ.ಎ	36,10,577
3	ಹೂಡಿಕೆ ಮಾಡಲಾದ ಮೊತ್ತವನ್ನು ಅವಧಿಪೂರ್ವವಾಗಿ ಹಿಂಪಡೆದಿರುವ ಮೊತ್ತ	1,00,00,000	ಹೊರ ಗುತ್ತಿಗೆ ನೌಕರರ ವೇತನ	13,91,712
4	ಹೂಡಿಕೆ ನಗದೀಕರಣ ಮೊತ್ತಕ್ಕೆ ಬಂದ ಬಡ್ಡಿ	2,30,48,548	ಸೆಕ್ಯೂರಿಟಿ ಗಾರ್ಡ್‌ಗಳ ವೇತನ	2,54,880
5	ಉಳಿತಾಯ ಖಾತೆಗಳಿಗೆ ನೀಡಲಾದ ಬಡ್ಡಿ	9,67,873	ಕಛೇರಿ ಉಪಯೋಗಕ್ಕೆ ಪಡೆದಿರುವ ವಾಹನಗಳ ಬಾಡಿಗೆ	8,39,400
6	ಉತ್ತಮತೆ / ವಿನ್ಯಾಸ ಅನುಮೋದನೆ ಶುಲ್ಕ	1,10,05,084	ವಿದ್ಯುತ್ ಬಿಲ್	68,883
7	ಕಟ್ಟಡ / ನಿವೇಶನ ಅನುಮೋದನೆ ಶುಲ್ಕ	19,91,734	ದೂರವಾಣಿ ಬಿಲ್	42,223
8	ಪರಿಶೀಲನಾ ಶುಲ್ಕ & ಉಸ್ತುವಾರಿ ಶುಲ್ಕ	1,68,494	ಸ್ಟಾಂಪ್ ಖರೀದಿ	8,000
9	ಸರ್ ಚಾರ್ಜ್ ಮತ್ತು ಸೆಸ್ ಶುಲ್ಕ	8,90,163	ಮಹಾಯೋಜನೆಯ ನಕ್ಷೆ ಮತ್ತು ಸಿ.ಡಿ.ಗಳನ್ನು ಖರೀದಿಸಲು ಭರಿಸಲಾದ ವೆಚ್ಚ	94,660
10	ಕೆರೆ ಅಭಿವೃದ್ಧಿ ಶುಲ್ಕ	1,08,35,107	ಪ್ರಾಧಿಕಾರದ ವಕೀಲರಿಗೆ ಪಾವತಿಸಲು ಭರಿಸಲಾದ ವೆಚ್ಚ	50,000
11	ಭದ್ರತಾ ಠೇವಣಿ	1,56,62,024	ಪ್ರಾಧಿಕಾರದ ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಪಾವತಿಸಲು ಭರಿಸಲಾದ ವೆಚ್ಚ	35,400
12	ಮಹಾ ಯೋಜನೆಯ ನಕ್ಷೆಗಳ ಮಾರಾಟ	97,800	ಪ್ರಕಟಣಾ ಶುಲ್ಕ	1,99,670
13	ಮಹಾ ಯೋಜನೆಯ ಸಿ.ಡಿ. ಮಾರಾಟ	6,200	ಮುದ್ರಣಾ ವೆಚ್ಚ	38,968
14	ಮಹಾ ಯೋಜನೆಯ ವಲಯ ನಿಯಮಾವಳಿಗಳ ಮಾರಾಟ	900	ದಿನ ಪತ್ರಿಕೆಗಳ ಖರೀದಿ	3,860
15	ಪ್ರಕಟಣಾ ಶುಲ್ಕ	2,40,000	ಕಛೇರಿ ಸ್ವಚ್ಛತೆ	36,000

16	ದೃಢೀಕೃತ ನಕಲು	17,628	ಪ್ರಾಧಿಕಾರದ ಕಛೇರಿಗೆ ಗಣಕಯಂತ್ರಗಳನ್ನು ಖರೀದಿಸಲು ಭರಿಸಲಾದ ವೆಚ್ಚ	2,29,392
17	ಅರ್ಜಿ/ಐ.ಪಿ.ಓ ಶುಲ್ಕ	16,952	ಅಭಿವೃದ್ಧಿ ಕಾಮಗಾರಿಗಳಿಗೆ ಪಾವತಿಸಲಾದ ವೆಚ್ಚ	5,69,16,966
18	ಇತರೆ ಮೊತ್ತ	2,05,478	ಸಿ.ಎಂ. ರಿಲೀಫ್ ಫಂಡ್ ಗಾಗಿ ಪಾವತಿಸಲಾದ ವೆಚ್ಚ	1,00,00,000
19	–	–	ಕಛೇರಿಯ ಇತರೆ ವೆಚ್ಚಗಳಿಗಾಗಿ ಭರಿಸಲಾದ ವೆಚ್ಚ	61,375
20	–	–	ಬ್ಯಾಂಕ್ ವೆಚ್ಚ	1,709
–	–	–	**ಒಟ್ಟು (ಎ)**	**33,38,83,675**
–	–	–	**ದಿ: 31.03.2020 ಕ್ಕೆ ಅಂತಿಮ ಶಿಲ್ಕು (ಬಿ)**	**13,28,62,905**
ಒಟ್ಟು ರೂ.		**46,67,46,580**	**ಒಟ್ಟು ರೂ. (ಎ+ಬಿ)**	**46,67,46,580**

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.